

ಇನ್ನೆಷ್ಟು ದಿನ ಕೊಳೆಯುತ್ತೀರಿ ಕಸವಾಗುತ್ತೀರಿ
ಸ್ನಾನದ ಕೋಣೆಗಳನ್ನು ಹಿಗ್ಗಿಸುತ್ತೀರಿ

ಎಷ್ಟು ದೊಡ್ಡದಿದೆ ನಿಮ್ಮ ಮುಚ್ಚಳ
ನೆಲದೆದೆಯ ಗಾಯಗಳನ್ನ
ಕಸದ ರಾಶಿಗಳನ್ನು ಮುಚ್ಚಿಡಲು
ಒಳಗೆ ನೆಲದೊಳಗೆ ಜೀವಗಳಿವೆ
ಉಸಿರಾಡಲಿ ನೆಲ

ಮೂಗು ಕಣ್ಣು ಮೈತುಂಬಾ ಬಾಯಿ
ಉಳಿಯಲೊಂದು ಭೂಮಿ ನಾಳೆಗಾಗಿ

ಕಾಯಕ ಕುಲದ ಬಸವಣ್ಣ
ನನ್ನ ಕಣ್ಣೀರಿನ ಬೆರಳ ತುದಿಯಲ್ಲಿ ಹಿಡಿದು
ದುಃಖಕ್ಕೆ ಇನ್ನೆಷ್ಟು ಸಾಕ್ಷಿಬೇಕು
ಕಲ್ಯಾಣದ ಕನಸು ಮುರಿದುಬಿದ್ದಿದೆ ನೋಡು
ಬಿತ್ತುವುದಕ್ಕೆ ಏನು ಉಳಿದಿದೆ, ತಿಳಿದಿಲ್ಲ ನನಗೆ

ಶೂನ್ಯ ಪೀಠದ ಅಲ್ಲಮ ಹಾಡುತ್ತಿದ್ದಾನೆ
ಪ್ರೀತಿ ಕೂಟಕ್ಕೆ ಹಾಸಿನ ಹಂಗ್ಯಾಕೆ ಎಂದು...

